**ಸಿ. ಸಿ. ನಂ. 5044/2023**

**ಪಿ ಡಬ್ಲ್ಯೂ: 2**

**ಸಾಕ್ಷಿಯು ದಿನಾಂಕ: 30.01.2026 ರಂದು ವಿಚಾರಣೆಗಾಗಿ ಹಾಜರಾಗಿದ್ದು ಅವರಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಪಾಟೀ ಸವಾಲು: ಆರೋಪಿ ಪರ ಶ್ರೀ ಕೆ ವಿ ಬಿ ವಕೀಲರಿಂದ**

ನಾನು ಅನುಗೃಹ ಕನ್ಸ್ಟ್ರಕಷನ್ ನಲ್ಲಿ 16 ವರ್ಷಗಳಿಂದ ಕೆಲಸ ಮಾಡುತ್ತಿದ್ದೇನೆ. ನಾನು ಹುಬ್ಬಳ್ಳಿಯ ಕಛೇರಿಯಲ್ಲಿ ಇರುತ್ತೇನೆ. ನನ್ನ ಅಧಿಕಾರ ವ್ಯಾಪ್ತಿಗೆ ಉತ್ತರ ಕರ್ನಾಟಕದ ಜಿಲ್ಲೆಗಳು ಬರುತ್ತವೆ. ಅನುಗೃಹ ಕನ್ಸ್ಟ್ರಕಷನ್ ಖಾಸಗಿ ಕಂಪನಿ ಇರುತ್ತದೆ. ಆರೋಪಿಗೆ ನೀಡಲಾದ ನೋಟಿಸ್ ನಿಪಿ-4 ರಲ್ಲಿನ ಅಂಶಗಳ ಬಗ್ಗೆ ನನಗೆ ಮಾಹಿತಿ ಇರುತ್ತದೆ. ನೋಟಿಸ್ ನಲ್ಲಿ ಕಂಪನಿಯ ನೋಂದಣಿ ಸಂಖ್ಯೆಯನ್ನು ನಮೂದು ಮಾಡಿಲ್ಲ ಎಂದರೆ ಸರಿ. ಅದೇ ರೀತಿ ದೂರಿನಲ್ಲಿ ಸಹ ಸದರಿ ನೋಂದಣಿ ಸಂಖ್ಯೆಯನ್ನು ನಮೂದು ಮಾಡಿಲ್ಲ ಎಂದರೆ ಸರಿ. ನೋಟಿಸ್ ನ್ನು 2023 ರ ಅಕ್ಟೋಬರ್ ನಲ್ಲಿ ಕೊಟ್ಟಿರುತ್ತಾರೆ.

ಆರೋಪಿ ನಮ್ಮ ಕಂಪನಿಯ ಗ್ರಾಹಕರಾಗಿದ್ದರು. ನಾವು ಆರೋಪಿಗೆ ಲೂಬ್ಸ್ ಮತ್ತು ಪಿಲ್ಲರ್ ಗಳನ್ನು ಸರಬರಾಜು ಮಾಡಿರುತ್ತೇವೆ. ನೋಟಿಸ್ ಮತ್ತು ದೂರಿನಲ್ಲಿ ಏನೆಲ್ಲಾ ಸರಕುಗಳು ಆರೋಪಿಗೆ ಸರಬರಾಜು ಮಾಡಿರುತ್ತೇವೆ ಎಂದು ನಮೂದಿಸಿಲ್ಲ ಎಂದರೆ ಸರಿಯಲ್ಲ. ಯಾವ ಯಾವ ದಿನಾಂಕದಂದು ಸರಬರಾಜು ಮಾಡಿರುತ್ತೇವೆ ಎಂದು ದೂರಿನಲ್ಲಿ ಮತ್ತು ನೋಟಿಸ್ ನಲ್ಲಿ ನಮೂದಿಸಿಲ್ಲ ಎಂದರೆ ಸರಿ. ಆರೋಪಿ 2019 ರಿಂದ ನಮ್ಮ ಕಂಪನಿಯ ಗ್ರಾಹಕರಾಗಿದ್ದರು.

ಕ್ರೆಡಿಟ್ ಆಧಾರದ ಮೇಲೆ ವ್ಯವಹಾರ ಆದಾಗ ಗ್ರಾಹಕರಿಂದ ಚೆಕ್ ಮತ್ತು ಇತರೆ ದಾಖಲೆಗಳನ್ನು ಪಡೆಯುತ್ತೇವೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಚೆಕ್ ಮಾತ್ರ ಪಡೆಯುತ್ತೇವೆ ಎಂದು ನುಡಿಯುತ್ತಾರೆ. ಆರೋಪಿಯಿಂದ ಪಡೆದ ಚೆಕ್

ನಲ್ಲಿ ದಿನಾಂಕವನ್ನು ಬರೆಯಲಾಗಿತು. ಸಾಕ್ಷಿ ಮುಂದುವರೆದು **31.07.2023** ಎಂದು ಬರೆದು ಕೊಟ್ಟಿದ್ದರು ಎಂದು ನುಡಿಯುತ್ತಾರೆ.

ನಮ್ಮ ಕಂಪನಿಗೆ ನಿರ್ದೇಶಕರು ಇರುವುದಿಲ್ಲ. ಸಾಕ್ಷಿ ಮುಂದುವರೆದು ಒಬ್ಬ ವ್ಯವಸ್ಥಾಪಕ ನಿರ್ದೇಶಕ ಮಾತ್ರ ಇರುತ್ತಾರೆ ಎಂದು ನುಡಿಯುತ್ತಾರೆ. ಕಂಪನಿಯಲ್ಲಿ ಯಾವುದೇ ಅಧಿಕಾರವನ್ನು ಅಥವಾ ಎಂ ಓ ಎ ವಹಿಸುವ ಮೊದಲು ಸಭೆ ಕರೆದು ಠರಾವನ್ನು ಹೊರಡಿಸಿಲಾಗುತ್ತದೆ ಎಂದರೆ ಸರಿ. ನನಗೆ ಅಧಿಕಾರ ವಹಿಸಲು ಕಂಪನಿಯಲ್ಲಿ ಯಾವಾಗ ಸಭೆ ಕರೆಲಾಗಿತು ಎಂದು ಗೊತ್ತಿರುವುದಿಲ್ಲ. ಸಾಕ್ಷಿ ಮುಂದುವರೆದು ಬೆಂಗಳೂರಿನ ಮುಖ್ಯ ಕಛೇರಿಯಲ್ಲಿಯೇ ಸಭೆ ಮಾಡಲಾಗುತ್ತದೆ ಎಂದು ನುಡಿಯುತ್ತಾರೆ. ನನಗೆ ಏಪ್ರಿಲ್-ಮೇ **2025** ರಲ್ಲಿ ಈ ಪ್ರಕರಣದಲ್ಲಿ ಹಾಜರಾಗುವಂತೆ ಕಂಪನಿಯಿಂದ ಪತ್ರ ಬಂದಿತ್ತು. ಪ್ರಕರಣ ನಡೆಸಲು ನನಗೆ ಕಂಪನಿಯಿಂದ ಯಾವುದೇ ಅಧಿಕಾರ ಪತ್ರ ನೀಡಿಲ್ಲ ಎಂದರೆ ಸರಿಯಲ್ಲ. ಪ್ರಕರಣದ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ.

ನಾವು ನಮ್ಮ ಕಂಪನಿಯ **4** ಕಛೇರಿಗಳನ್ನು ಉತ್ತರ ಕರ್ನಾಟಕದಲ್ಲಿ ಹೊಂದಿರುತ್ತೇವೆ. ಹೊಸಪೇಟೆಯಲ್ಲಿ ಒಂದು ಕಛೇರಿ ಇರುತ್ತದೆ. ನಮ್ಮ ಕಂಪನಿಯಿಂದ ರಸ್ತೆ ನಿರ್ಮಾಣದ, ಗಣಿಗಾರಿಕೆಯ ಮತ್ತು ದೊಡ್ಡ ಕಟ್ಟಡಗಳ ನಿರ್ಮಾಣದ ಸಮಾನುಗಳನ್ನು ಮಾರಾಟ ಮಾಡುತ್ತೇವೆ. ಎಲ್ ಆ್ಯಂಡ್ ಟಿ ಸಮಾನುಗಳನ್ನು ಮಾರಾಟ ಮಾಡಿದ್ದ ಬಗ್ಗೆ ಸಲ್ಲಿಸಿರುವ ನಿಪಿ-**12** ರಿಂದ **14** ರ ದಾಖಲೆಗಳು ಮೂಲ ದಾಖಲೆಗಳಾಗಿರುತ್ತವೆ.

ಕ್ರೆಡಿಟ್ ಆಧಾರದ ಮೇಲೆ ವ್ಯವಹಾರ ಆದಾಗ ಬಿಲ್ ನ ಮೂಲ ಪ್ರತಿಯನ್ನು ಗ್ರಾಹಕರಿಗೆ ನೀಡುತ್ತೇವೆ. ನಿಪಿ-**12** ರಿಂದ **14** ರ ದಾಖಲೆಗಳು ಮೂಲ

ದಾಖಲೆಗಳು ಅಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅವು ಸೆಕೆಂಡ್ ಕಾಪಿ ಎಂದು ನುಡಿಯುತ್ತಾರೆ. ನಿಪಿ-12 ರಿಂದ 14 ರಲ್ಲಿ ಆರೋಪಿಯ ಸಹಿಗಳು ಇರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಆರೋಪಿಯ ಸಹಾಯಕರು ಸಹಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಆರೋಪಿ ಸಹಾಯಕ ಸಹಿ ಮಾಡಿರುತ್ತಾನೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-12 ರಿಂದ 14 ದಾಖಲೆಗಳನ್ನು ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ.

ಜಿ ಎಸ್ ಟಿ ಪ್ರಮಾಣ ಪತ್ರ ನಿಪಿ-15 ಮೂಲ ದಾಖಲೆ ಅಲ್ಲ. ಸಾಕ್ಷಿ ಮುಂದುವರೆದು ಅದು ನಕಲು ಪ್ರತಿ ಎಂದು ನುಡಿಯುತ್ತಾರೆ. ಸಂಡೂರು ಲಾಜೆಸ್ಟಿಕ್ ಕಂಪನಿ ಮತ್ತು ಅದರ ಮಾಲೀಕರನ್ನು ಆರೋಪಿತರು ಎಂದು ತೋರಿಸಿರುತ್ತೀರಾ ಎಂಬ ಪ್ರಶ್ನೆಗೆ ಸಾಕ್ಷಿ ಸದರಿ ಸಂಸ್ಥೆಯನ್ನು ತೋರಿಸಿ ಅದರ ಮಾಲೀಕರು ಯಾರು ಎಂಬುದನ್ನು ಕಾಣಿಸಿರುತ್ತೇವೆ ಎಂದು ನುಡಿಯುತ್ತಾರೆ.

ಆರೋಪಿ ಮೇ, ಜೂನ್, ಜುಲೈ 2023 ರಲ್ಲಿ ನಮ್ಮಿಂದ ಸಾಮಾನುಗಳನು ಖರೀದಿಸಿರುತ್ತಾರೆ ದಿನಾಂಕಗಳು ನನಗೆ ಗೊತ್ತಿಲ್ಲ. ಸಾಮಾನುಗಳನ್ನು ಖರೀದಿಸಿದ ದಿನದಂದೆ ಖಾಲಿ ಚೆಕ್ ಪಡೆಯಲಾಗುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಹಣ ಮತ್ತು ದಿನಾಂಕ ಬರೆಯದಿದ್ದರು ಎಂದು ನುಡಿಯುತ್ತಾರೆ. ನಿಪಿ-1 ರಲ್ಲಿನ ಬರಹಗಳನ್ನು ಗ್ರಾಹಕರೆ ತುಂಬಿರುತ್ತಾರೆ. ಚೆಕ್ ನಲ್ಲಿನ ದಿನಾಂಕ ಬರೆದಿರುವ ಪೆನ್ನಿನ ಇಂಕ್, ಹಣದ ಮೊತ್ತ ಬರೆದಿರುವ ಪೆನ್ನಿನ ಇಂಕ್ ಮತ್ತು ಸಹಿ ಹಾಕಿರುವ ಪೆನ್ನಿನ ಇಂಕ್ ಬೇರೆ ಬೇರೆ ಇರುತ್ತವೆ ಎಂದರೆ ಸರಿ.

**ಸಿ. ಸಿ. ನಂ. 5044/2023**

**ಪಿ ಡಬ್ಲ್ಯೂ: 2**

**ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೇಳಿದ್ದು ಪಾಟೀ ಸವಾಲು ಮುಂದುಡಲಾಯಿತು.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ., ವಿಜಯನಗರ ಜಿಲ್ಲೆ, ಹೊಸಪೇಟೆ.